MARCH 03, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ಇಂದಿನಿಂದ 21ರ ವರೆಗೆ, ರಾಜ್ಯ ವಿಧಾನ ಮಂಡಲ ಅಧಿವೇಶನ; ರಾಜ್ಯಪಾಲರಿಂದ ಇಂದು ಭಾಷಣ.
- ಇಂದು, ವಿಶ್ವ ವನ್ಯಜೀವಿ ದಿನಾಚರಣೆ; ಹಸಿರು ಕಡಲಾಮೆಗಳ ಹೆರಿಗೆ ಮನೆ ಉಳಿಸಲು, ವಿಶೇಷ ಅಭಿಯಾನ.
- 3 ಎಕರೆಗಿಂತ ಹೆಚ್ಚು, ಅರಣ್ಯ ಭೂಮಿ ಒತ್ತುವರಿ; ಇಲಾಖೆಯಿಂದ ತೆರವಿಗೆ ಕಾನೂನು ಕ್ರಮ.
- ರಾಜ್ಯಕ್ಕೆ, 40 ಸಾವಿರ, 'ಪ್ರಧಾನಮಂತ್ರಿ ಕುಸುಮ್ ಬಿ', ಸೌರ ಘಟಕಗಳ ಮಂಜೂರಾತಿ.

<><><>

ಈಗ ವಾರ್ತೆಗಳ ವಿವರ

<><><>

ಇಂದಿನಿಂದ, ಇದೇ 21ರ ವರೆಗೆ, ಸರ್ಕಾರಿ ರಜಾ ದಿನಗಳನ್ನು ಹೊರತು ಪಡಿಸಿ, 15 ದಿನಗಳ, ರಾಜ್ಯ ವಿಧಾನ ಮಂಡಲದ ಮುಂಗಡಪತ್ರ ಅಧಿವೇಶನ ನಡೆಯಲಿದೆ. ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಇಂದು, ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ, ಭಾಷಣ ಮಾಡಲಿದ್ದಾರೆ. ಅಗಲಿದ ಗಣ್ಯರಿಗೆ ಸಂತಾಪ ಸೂಚನೆ ಬಳಿಕ, ಮೂರು ದಿನಗಳ ಕಾಲ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯಲಿದೆ. ಶುಕ್ರವಾರ 7ನೇ ತಾರೀಖು, ಹಣಕಾಸು ಖಾತೆಯನ್ನೂ ಹೊಂದಿರುವ, ಮುಖ್ಯಮಂತ್ರಿ ಸಿದ್ದರಾಮಯ್ಯ 16ನೇ ಬಜೆಟ್ ಮಂಡಿಸಲಿದ್ದಾರೆ.

<><><>

ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ನಿರ್ಣಯದಂತೆ, ಇಂದು ವಿಶ್ವ ವನ್ಯಜೀವಿ ದಿನಾಚರಣೆ. 'ವನ್ಯಜೀವಿ ಸಂರಕ್ಷಣೆಗೆ ಹಣಕಾಸು: ಜನ ಹಾಗೂ ಗ್ರಹದಲ್ಲಿ ಹೂಡಿಕೆ' ಎಂಬ ಧ್ಯೇಯದೊಂದಿಗೆ, ವಿಶ್ವ ವನ್ಯಜೀವಿ ದಿನಾಚರಣೆಯನ್ನು ಇಂದು ಆಚರಿಸಲಾಗುತ್ತಿದೆ. ಭೂ ಗ್ರಹ ಮತ್ತು ಮನುಷ್ಯರಿಗಾಗಿ, ವನ್ಯಜೀವಿಗಳ ಕೊಡುಗೆಗಳು ಹಾಗೂ, ಅವು ವಹಿಸುವ ವಿಶಿಷ್ಟ ಪಾತ್ರದ ಕುರಿತು, ಜನಜಾಗ್ರತಿ ಮೂಡಿಸಲು, ಈ ದಿನ ಮೀಸಲಾಗಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಇಂದು, ಗುಜರಾತ್‌ನ ಜುನಾಘಡ್ ಜಿಲ್ಲೆಯ ಸಾಸನ್ ಗೀರ್‌ನಲ್ಲಿ, ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ 7ನೇ ಸಭೆ ಆಯೋಜಿತವಾಗಿದೆ. ಈ ಸಭೆಯಲ್ಲಿ, ರಾಜ್ಯದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಅನುಮೋದನೆಯ ಪ್ರಸ್ತಾವ, ಚರ್ಚೆಗೆ ಬರುವ ಸಂಭವವಿದೆ. ಈ ಯೋಜನೆಗೆ, ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿ, ಈಗಾಗಲೇ ಒಪ್ಪಿಗೆ ನೀಡಿದೆ.

<><><>

ಅಪರೂಪದ ಹಾಗೂ ಅಳಿವಿನಂಚಿನಲ್ಲಿರುವ, ಹಸಿರು ಕಡಲಾಮೆಗಳ ಹೆರಿಗೆ ಮನೆ ಉಳಿಸಲು, ವಿಶೇಷ ಅಭಿಯಾನ ಆಯೋಜಿತವಾಗಿದೆ. ಆ ಕುರಿತು, ಒಂದು ವರದಿ..

<><><>

*ಸಮುದ್ರದಲ್ಲಿ ಕಾಣಸಿಗುವ ಒಟ್ಟು 7 ಪ್ರಜಾತಿಯ ಕಡಲಾಮೆಗಳ ಪೈಕಿ, 5 ಕಡಲಾಮೆಗಳು, ಭಾರತದ ಕಡಲ ತೀರದಲ್ಲಿ ಕಾಣಸಿಗುತ್ತವೆ. ಎಲ್ಲ 7 ಪ್ರಜಾತಿಯ ಕಡಲಾಮೆಗಳು ಅಳಿವಿನಂಚಿನಲ್ಲಿವೆ ಎಂಬುದು ಕಳವಳಕಾರಿ ಸಂಗತಿ. ಆ ಪೈಕಿ ಹಸಿರು ಕಡಲಾಮೆ, ಆಲಿವ್ ರಿಡ್ಲೇ ಟರ್ಟಲ್ ಭಾರತವನ್ನು, ತನ್ನ ಹೆರಿಗೆ ಮನೆ ಆಗಿಸಿಕೊಂಡಿರುವುದು ವಿಶೇಷ. ಕರ್ನಾಟಕದ ಕರಾವಳಿ ಹಾಗೂ ಒರಿಸ್ಸಾದ ಕಡಲ ತೀರಗಳಲ್ಲಿ, ಈಗ ಸಾವಿರಾರು ಹಸಿರು ಕಡಲಾಮೆಗಳು, ಮೊಟ್ಟೆ ಇಡಲು ತಟಕ್ಕೆ ಆಗಮಿಸುತ್ತಿವೆ. ಆದರೆ ಬಂದರುಗಳಲ್ಲಿ, ದಿನದ 24 ಗಂಟೆ ಮಾನವ ಚಟುವಟಿಕೆ, ಪ್ಲಾಸ್ಟಿಕ್ ಸೇರಿದಂತೆ ಘನತಾಜ್ಯ ಸುರಿ, ಅವುಗಳ ಹೆರಿಗೆ ಮನೆಯನ್ನು ಕಸಿದು, ಕ್ಷೀಣಿಸುವಂತೆ ಮಾಡಿದೆ. ಕಳೆದ 4 ದಶಕಗಳಿಂದ, ಕಡಲಾಮೆಗಳ ಅಧ್ಯಯನ ನಿರತರಾಗಿರುವ, ಉತ್ತರಕನ್ನಡ ಜಿಲ್ಲೆ ಕುಮಟಾದ, ಹಿರಿಯ ಕಡಲ ಜೀವಶಾಸ್ತ್ರಜ್ಞ, ಪ್ರೊಫೆಸರ್ ವಿ.ಎನ್.ನಾಯಕ್ ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.*

<><><>

ವಿವೇಕ ಧ್ವನಿ 50 ಸೆಕೆಂದುಗಳು + ವಿ.ಎನ್.ನಾಯಕ್ ಧ್ವನಿ 50 ಸೆಕೆಂದುಗಳು.

<><><>

ಶಿವಮೊಗ್ಗದ ತ್ಯಾವರೆಕೊಪ್ಪ ಹುಲಿ–ಸಿಂಹ ಧಾಮದಲ್ಲಿ ವಿಶ್ವ ವನ್ಯಜೀವಿ ದಿನಾಚರಣೆ ಅಂಗವಾಗಿ, ಮೃಗಾಲಯದ ಪ್ರಾಣಿಗಳನ್ನು ದತ್ತು ಪಡೆಯಲು ಉತ್ತೇಜಿಸುವ, ಕಾರ್ಯಕ್ರಮ, ಇಂದು ಏರ್ಪಡಿಸಲಾಗಿದೆ ಎಂದು, ಧಾಮದ ನಿರ್ದೇಶಕರು ತಿಳಿಸಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಭಾಗಿತ್ವದಲ್ಲಿ, 'ನಮ್ಮ ಕಾಡು ನಮ್ಮ ಕೆರೆ' ಕಾರ್ಯಕ್ರಮದಡಿ, ಹುಲಿ–ಸಿಂಹಧಾಮದ ಆವರಣದೊಳಗೆ, 10 ಕೆರೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಗೆ, ಇಂದು ಬೆಳಗ್ಗೆ 10 ಗಂಟೆಗೆ, ಚಾಲನೆ ನೀಡಲಾಗುತ್ತಿದೆ. Zoo Vista Project ಹಾಗೂ 3r ವರ್ಚುವಲ್ ಝೂ ಯೋಜನೆ ಉದ್ಘಾಟನೆ ಸಹ ಜರುಗಲಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಜಾನಪದ ಅಕಾದೆಮಿ, 2024ನೇ ಸಾಲಿನ ಪ್ರಶಸ್ತಿಗೆ, ರಾಜ್ಯದ 30 ಜಿಲ್ಲೆಗಳಿಂದ 30 ಹಿರಿಯ ಜಾನಪದ ಕಲಾವಿದರನ್ನು ಹಾಗೂ ಇಬ್ಬರು ಜಾನಪದ ತಜ್ಞರನ್ನು ಆಯ್ಕೆ ಮಾಡಿದೆ ಎಂದು ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ತಿಳಿಸಿದ್ದಾರೆ.

<><><>

ಆ ಪೈಕಿ, ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕು, ಹೆಗ್ಗೋಡು ಬಳಿಯ ಹೊನ್ನೇಸರದ, ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷೆ, ಗೌರಮ್ಮ, ಜಾನಪದ ಅಕಾದೆಮಿಯ 2024ನೇ ಸಾಲಿನ ಪ್ರಶಸ್ತಿಗೆ ಭಾಜನರಾಗಿದ್ದಾರೆ. 'ಹಸೆ' ಚಿತ್ತಾರದ ಕಲಾವಿದೆ ಹೊನ್ನೇಸರದ ಗೌರಮ್ಮ, ಮಲೆನಾಡಿನ ಗೋಡೆಗಳ ಮೇಲಿನ ಹಸೆ ಚಿತ್ರವನ್ನು, ಮೊಟ್ಟ ಮೊದಲ ಬಾರಿಗೆ, ಸೀರೆ, ಕುಪ್ಪಸ, ಫೈಲ್, ಬಟ್ಟೆ, ಪೆನ್ ಸ್ಟ್ಯಾಂಡ್ ಮೇಲೂ ಮೂಡಿಸಬಹುದು ಎಂದು ತೋರಿಸಿಕೊಟ್ಟವರು. ಪ್ರದೇಶ ಸಮಾಚಾರಕ್ಕಾಗಿ ಅವರು, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಹೊನ್ನೇಸರದ ಗೌರಮ್ಮ ಧ್ವನಿ 46 ಸೆಕೆಂದುಗಳು.

<><><>

3 ಎಕರೆಗಿಂತ ಹೆಚ್ಚು, ಅರಣ್ಯ ಭೂಮಿ ಒತ್ತುವರಿ ಮಾಡಿರುವವರ ವಿರುದ್ಧ, ಕಾನೂನು ಕ್ರಮ ಕೈಗೊಂಡು, ಒತ್ತುವರಿ ತೆರವುಗೊಳಿಸುವಂತೆ, ಅರಣ್ಯ ಖಾತೆ ಸಚಿವ ಈಶ್ವರ್ ಖಂಡ್ರೆ ಸೂಚಿಸಿದ್ದಾರೆ. ಸಚಿವರು ತುಮಕೂರಿನಲ್ಲಿ, ಹಾಸನ ವೃತ್ತದ ಅರಣ್ಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ದೀರ್ಘ ಕಾಲದಿಂದ ಬಾಕಿ ಇರುವ, ಅರಣ್ಯ ಒತ್ತುವರಿ ಪ್ರಕರಣಗಳನ್ನು, ಶೀಘ್ರ ಇತ್ಯರ್ಥ ಪಡಿಸಲು ಕ್ರಮ ಕೈಗೊಳ್ಳುವಂತೆ, ಅಧಿಕಾರಿಗಳಿಗೆ ನಿರ್ದೇಶಿಸಿದರು. ಪಟ್ಟಾ ಜಮೀನು ಮತ್ತು ಜೀವನೋಪಾಯಕ್ಕಾಗಿ ಮಾಡಿಕೊಂಡಿರುವ, ಅರಣ್ಯ ಒತ್ತುವರಿ ಎರಡೂ ಸೇರಿ, 3 ಎಕರೆಗಿಂತ ಕಡಿಮೆ ಇರುವ, ಸಣ್ಣ ಒತ್ತುವರಿದಾರರಿಗೆ ತೊಂದರೆ ನೀಡದಂತೆ, ಅವರು ಸೂಚಿಸಿದರು.

<><><>

ಚಿಕ್ಕಮಗಳೂರು ಜಿಲ್ಲೆ, ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ, ಬಲ್ಲಾಳ ರಾಯನ ದುರ್ಗ ಅರಣ್ಯದಲ್ಲಿ, ಕಾಡ್ಗಿಚ್ಚು ಹಬ್ಬಿ, ಗಣನೀಯ ಪ್ರಮಾಣದಲ್ಲಿ ಅರಣ್ಯ ನಾಶ ಉಂಟಾಗಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. 20ಕ್ಕೂ ಹೆಚ್ಚು ಎಕರೆ ಅರಣ್ಯ ಪ್ರದೇಶಕ್ಕೆ ಬೆಂಕಿ ವ್ಯಾಪಿಸಿದ್ದು, ಎತ್ತರದ ಬೆಟ್ಟ ಹಾಗೂ ಬೆಂಕಿ ನಂದಿಸಲು ಮಾರ್ಗ ಲಭ್ಯವಿರದ ಕಾರಣ, ಅರಣ್ಯ ಇಲಾಖೆ ಹಾಗೂ ಅಗ್ನಿ ಶಾಮಕ ದಳ ಸಿಬ್ಬಂದಿಗೆ ಬೆಂಕಿ ನಂದಿಸುವುದು, ಸವಾಲಾಗಿ ಪರಿಣಮಿಸಿದೆ. ಕಳೆದ ಒಂದು ತಿಂಗಳ ಅವಧಿಯಲ್ಲಿ, ಜಿಲ್ಲೆಯ ಚಾರ್ಮಾಡಿ ಘಾಟ್, ಬಿದಿರು ತಳ, ಮುಳ್ಳಯ್ಯನಗಿರಿ ಸೇರಿದಂತೆ, ಜಿಲ್ಲೆಯ ಹಲವು ಅರಣ್ಯ ಭಾಗಗಳಲ್ಲಿ ಕಾಡ್ಗಿಚ್ಚು ಹಬ್ಬಿ, ಅಪಾರ ಪ್ರಮಾಣದ ಕಾಡು ನಾಶವಾಗಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಇಚ್ಛೆಯಂತೆ, ನವೀಕರಿಸಬಹುದಾದ ಇಂಧನ ಇಲಾಖೆ ವತಿಯಿಂದ, ರಾಜ್ಯಕ್ಕೆ ಪ್ರಸ್ತುತ, 40 ಸಾವಿರ ಪಿ.ಎಂ. ಕುಸುಮ್ ಸೌರ ಘಟಕಗಳ ಮಂಜೂರಾತಿ ನೀಡಿದ್ದಾಗಿ, ಕೇಂದ್ರದ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ಪ್ರಕಟಿಸಿರುವ ಅವರು, ರಾಜ್ಯದ ಅನ್ನದಾತರ ಸಬಲೀಕರಣಕ್ಕಾಗಿ, ಪ್ರಧಾನಮಂತ್ರಿ ಕುಸುಮ್ ಯೋಜನೆಯನ್ನು ಕೇಂದ್ರ ಜಾರಿಗೊಳಿಸಿದೆ. 'ಕುಸುಮ್ ಬಿ' ಅನು ್ಠಾನದಿಂದ, ರಾಜ್ಯ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿ ಆರ್ಥಿಕ ಹೊರೆ ತಗ್ಗಿ, 3 ಸಾವಿರ ಮೆಗಾವ್ಯಾಟ್ ವಿದ್ಯುತ್ ಉಳಿತಾಯ ವಾಗುತ್ತದೆ. ರಾಜ್ಯ ಸರ್ಕಾರ ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಲು, ನಿರಾಸಕ್ತಿ ತೋರುತ್ತಿದೆ ಎಂದು, ಆರೋಪಿಸಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆಯಲ್ಲಿ ಇಂದು ಮತ್ತು ನಾಳೆ, ಬಿಸಿ ಗಾಳಿ ಬೀಸುವ ಸಾಧ್ಯತೆ ಇದ್ದು, ಸಾರ್ವಜನಿಕರು ಅಗತ್ಯ ಮುಂಜಾಗ್ರತೆ ವಹಿಸುವಂತೆ, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ತಿಳಿಸಿದೆ. ಮಧ್ಯಾಹ್ನ 12 ಗಂಟೆಯಿಂದ 3ರ ವರೆಗೆ, ಪ್ರಖರ ಬಿಸಿಲಿನಲ್ಲಿ ಅಡ್ಡಾಡದಂತೆ, ಸಾಕಷ್ಟು ನೀರು ಕುಡಿಯುವಂತೆ ಹಾಗೂ ಹತ್ತಿ ಬಟ್ಟೆ ಧರಿಸುವಂತೆ, ಸೂಚಿಸಿದೆ. ತುರ್ತು ಸಂದರ್ಭದಲ್ಲಿ, 1077 ಸಹಾಯವಾಣಿ ಸಂಪರ್ಕಿಸುವಂತೆ ತಿಳಿಸಲಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

‘ಮನೋಸ್ಥಿತಿ ಬದಲಿಸಿ, ಎಲ್ಲರಿಗೂ ಕಿವಿ ಮತ್ತು ಶ್ರವಣ ಆರೈಕೆ ಸಾಧ್ಯವಾಗಿಸಲು, ನಿಮ್ಮನ್ನು ನೀವು ಸಬಲಗೊಳಿಸಿ’ ಎಂಬ, ಧ್ಯೇಯವಾಕ್ಯದೊಂದಿಗೆ, ಇಂದು ವಿಶ್ವ ಶ್ರವಣ ದಿನ ಆಚರಿಸಲಾಗುತ್ತಿದೆ.

<><><>

ಚಿಕ್ಕಮಗಳೂರು ಜಿಲ್ಲೆ, ಹರಿಹರಪುರ ಮಠದ, ಗುರುದೀಕ್ಷಾ ಪಟ್ಟಾಭಿಷೇಕ ಕಾರ್ಯಕ್ರಮದಲ್ಲಿ, ಸಚಿವ ಕೆ.ಎಚ್ ಮುನಿಯಪ್ಪ ಪಾಲ್ಗೊಂಡಿದ್ದರು.

<><><>

ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲೂಕಿನ, ಕೈವಾರದ ಸದ್ಗುರು ಯೋಗಿ ನಾರೇಯಣ ಮಠದಲ್ಲಿ, ಈ ತಿಂಗಳ 13 ರಿಂದ 15ರ ವರೆಗೆ, ಜಯಂತ್ಯುತ್ಸವ ನಡೆಯಲಿದೆ.

<><><>

ನೈಋತ್ಯ ರೈಲ್ವೆ ವಲಯದ, ನೂತನ ಪ್ರಧಾನ ವ್ಯವಸ್ಥಾಪಕರಾಗಿ, ಮುಕುಲ್ ಸರನ್ ಮಾಥೂರ್ ಹುಬ್ಬಳ್ಳಿಯಲ್ಲಿ, ಅಧಿಕಾರ ಸ್ವೀಕರಿಸಿದರು.

<><><>

ರಾಜ್ಯ ವೈದ್ಯ ಪರಿ ‘ತ್ತು, ಬೀದರ್‌ನಲ್ಲಿ ಆಯೋಜಿಸಿದ, 15ನೇ ರಾಜ್ಯ ಮಟ್ಟದ ಪಾರಂಪರಿಕ ವೈದ್ಯ ಸಮ್ಮೇಳಕ್ಕೆ ಚಾಲನೆ ದೊರೆತಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಇಂದಿನಿಂದ 21ರ ವರೆಗೆ, ರಾಜ್ಯ ವಿಧಾನ ಮಂಡಲ ಅಧಿವೇಶನ; ರಾಜ್ಯಪಾಲರಿಂದ ಭಾಷಣ.
- ಇಂದು, ವಿಶ್ವ ವನ್ಯಜೀವಿ ದಿನಾಚರಣೆ; ಹಸಿರು ಕಡಲಾಮೆಗಳ ಹೆರಿಗೆ ಮನೆ ಉಳಿಸಲು, ವಿಶೇಷ ಅಭಿಯಾನ.
- 3 ಎಕರೆಗಿಂತ ಹೆಚ್ಚು, ಅರಣ್ಯ ಭೂಮಿ ಒತ್ತುವರಿ; ಇಲಾಖೆಯಿಂದ ತೆರವಿಗೆ ಕಾನೂನು ಕ್ರಮ.
- ರಾಜ್ಯಕ್ಕೆ, 40 ಸಾವಿರ, ‘ಪ್ರಧಾನಮಂತ್ರಿ ಕುಸುಮ್ ಬಿ’, ಸೌರ ಘಟಕಗಳ ಮಂಜೂರಾತಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>